

# ನೃತ್ಯವೂ ಆಟದಷ್ಟೇ ರೋಮಾಂಚಕ

**ಸ್ನೇಹ ಆಚಾರ್ಯ**
ಸ್ಟಾರ್‌ಸುವರ್ಣದ
'ಸತ್ಯಂ ಶಿವಂ ಸುಂದರಂ'ನ
ಪಾಪ್ಸಿ

★ *ನಟಿಯಾಗಿದ್ದು ಹೇಗೆ? ಈ ಬಗ್ಗೆ ಬೇಸರ ಏನಾದರೂ ಇದೆಯಾ?*

ಕ್ರೀಡೆ ನನ್ನ ಆಸಕ್ತಿ. ಅದರಲ್ಲಿಯೇ ಹೆಸರು ಮಾಡಬೇಕಿತ್ತು ಎಂದು ನಿರಂತರ ಅಭ್ಯಾಸ ಮಾಡಿದೆ. ನಟನೆ ನನ್ನ ಆಯ್ಕೆ ಆಗಿರಲಿಲ್ಲ. ಈ ಬಗ್ಗೆ ಯೋಚನೆಯನ್ನೂ ಮಾಡಿರಲಿಲ್ಲ. ಇದರತ್ತ ಬರುವಂತೆ ಮಾಡಿದ್ದು ಡಾನ್ಸ್. ಅದು ನನಗೆ ಅತ್ಯಂತ ಪ್ರಿಯ ಕೆಲಸ. ಪಾರಂಪರಿಕ ಕಲಾ ಪ್ರಕಾರಗಳಲ್ಲಿ ನೃತ್ಯ ಅತ್ಯಂತ ಹಳೆಯದು. ಅದು ಇತಿಹಾಸವನ್ನೂ ಅನುಸಂಧಾನ ಮಾಡುತ್ತದೆ. ನೀವು ಯಾವುದೇ ಪ್ರಾಚೀನ ದೇವಸ್ಥಾನ ನೋಡಿದರೂ ನೃತ್ಯದ ನೂರಾರು ಭಂಗಿಗಳನ್ನು ಕಾಣಬಹುದು. ಅದರತ್ತ ಒಲವು ತೋರಿದಂತೆ ಕ್ರೀಡೆ ಹಿನ್ನೆಲೆಗೆ ಸರಿಯಿತು. ಪ್ರದರ್ಶನ ಕಲೆಯಾಗಿದ್ದರಿಂದ ನಟನೆಯತ್ತ ವಾಲಲು ಸಾಧ್ಯವಾಯಿತು.

ಹಾಗೆಂದು ಬೇಸರವೇನೂ ಇಲ್ಲ ಖುಷಿನೇ ಆಗಿದೆ. ಕ್ರೀಡೆ ಏಕತಾನತೆಯನ್ನು ಹುಟ್ಟಿಸುವ ಸಾಧ್ಯತೆ ಇತ್ತು. ಆದರೆ ಇಲ್ಲಿ ವೈವಿಧ್ಯತೆ ಇದೆ. ಅಷ್ಟು ಮಾತ್ರ ಅಲ್ಲದೆ ಆಧುನಿಕ ಕೆಲವು ಡಾನ್ಸ್‌ಗಳು ಕೂಡ ಕ್ರೀಡೆಯಷ್ಟೇ ಶ್ರಮ–ಕೌಶಲ್ಯವನ್ನು ಬಯಸುತ್ತವೆ. ಸಾಹಸಮಯ ನೃತ್ಯಗಳೂ ಮೈಜುಮ್ಮೆನಿಸುತ್ತವೆ. ಹೀಗಿರುವಾಗ ಈಗ ಅಭಿನಯವೇ ಚೆಂದ ಅನ್ನಿಸಿದೆ.

★ *'ಪಾಪ್ಸಿ' ಹಿಡಿಸಿದ್ದಾಳಾ?*

'ಪಾಪ್ಸಿ' ಅದ್ದೂರಿ ಪಾತ್ರ. ದೊಡ್ಡ ಶ್ರೀಮಂತರ ಮನೆತನದವಳು. ಆಕೆ ಇಲ್ಲಿ 'ಶಿವಂ'ನ ಜೋಡಿಯಾಗಿದ್ದಾಳೆ. ಸಂಬಂಧಗಳು ಕೂಡ ವ್ಯಾವಹಾರಿಕ ಆಗಿರುವ ಸಮಕಾಲೀನ ಸಂದರ್ಭ ಕೂಡ ಕಥೆಯಲ್ಲಿ ಸೇರಿದೆ. ಮದುವೆ ನಿಶ್ಚಯ ಆಗಿದ್ದರೂ ಕೂಡ ಮದುವೆ ಏರ್ಪಡುವ ಸಾಧ್ಯತೆ ಇಲ್ಲ ಎನ್ನುವಷ್ಟು ಹೊಯ್ದಾಟ ಕುತೂಹಲವನ್ನು ಕೆರಳಿಸಿದೆ. ನನಗೆ ಅನ್ನಿಸಿದಂತೆ ಮದುವೆಯಾಗುವ ಸಾಧ್ಯತೆ ಕಡಿಮೆ ಇದೆ.

★ *ಹುಟ್ಟಿದ್ದು ಬೆಳೆದಿದ್ದು ಎಲ್ಲಿ?*

ಕುವೈತ್‌ನಲ್ಲಿ ನಮ್ಮ ತಂದೆ ವೈದ್ಯರಾಗಿದ್ದಾರೆ. ನಾನು ಓದಿದ್ದು ಬೆಳೆದಿದ್ದು ಬೆಂಗಳೂರಿನಲ್ಲಿ. ಮೂರು ವರ್ಷ ಮುಂಬೈನಲ್ಲಿ ಬಾಲಿವುಡ್‌ಗೆ ಕೊರಿಯೋಗ್ರಫಿ ಮಾಡುತ್ತಿದ್ದೆ. ಅದರ ಜೊತೆ ರಂಗಭೂಮಿಯಲ್ಲಿಯೂ ತೊಡಗಿದ್ದೆ. ಬೇರೆ ಬೇರೆ ಭಾಷೆಯ ಹಲವಾರು ನಾಟಕಗಳನ್ನು ಅಲ್ಲಿ ಆಡಿದೆ. ಬಾಲಿವುಡ್‌ನ ಪ್ರಸಿದ್ಧ ನಟರಿಗೆ ಕೊರಿಯೋಗ್ರಫಿ ಮಾಡಿದೆ. ಮತ್ತೀಗ ಬೆಂಗಳೂರಿನಲ್ಲಿ ನೆಲೆಗೊಂಡಿದ್ದೇನೆ.

★ *ಕಿರುತೆರೆಯ ನಿಮ್ಮ ಸಂಬಂಧದ ಬಗ್ಗೆ ಹೇಳಿ..*

ಎಂ– ಟಿವಿಯಲ್ಲಿ ಹಿಂದಿ ಧಾರಾವಾಹಿಯಲ್ಲಿ ಮೊದಲು ನಟಿಸಿದೆ. ಕನ್ನಡದಲ್ಲಿ 'ಸಾಗರ ಸಂಗಮ'ದಲ್ಲಿಯೂ ನಟಿಸಿದೆ. 'ಡಾನ್ಸಿಂಗ್ ಸ್ಟಾರ್'ನಲ್ಲಿ ಅಂತಿಮ ಸುತ್ತಿನ ಸ್ಪರ್ಧೆವರೆಗೂ ಪೈಪೋಟಿ ನೀಡಿದ್ದೆ. ಮೂರನೇ ಸ್ಥಾನಕ್ಕೆ ತೃಪ್ತಿ ಪಡಬೇಕಾಯಿತು. 'ಕುಣಿಯೋಣು ಬಾರಾ' ನಿರೂಪಣೆಯನ್ನು ನಾನೇ ನಾನು ಮಾಡಿದೆ.

ಸಿನಿಮಾದಲ್ಲಿಯೂ ನಟಿಸುತ್ತಿದ್ದೇನೆ. 'ಜೋಷ್'ನಲ್ಲಿ ನಟಿಸಿದೆ. ಇದೆಲ್ಲದಕ್ಕಿಂತ 'ಆಕೆ' ಸಿನಿಮಾ ನನ್ನಲ್ಲಿ ತುಂಬಾ ಭರವಸೆಯನ್ನು ತುಂಬಿದೆ. ಯೂರೋಪಿನಲ್ಲಿಯೇ ಹೆಚ್ಚು ಚಿತ್ರೀಕರಣ ಮಾಡಿದ್ದೇವೆ. ಅದೆಲ್ಲದಕ್ಕಿಂತ ಸಂತಸದ ಸಂಗತಿ ಏನೆಂದರೆ ಇದೇ ಮೊದಲ ಬಾರಿಗೆ ಹಾಲಿವುಡ್ ತಂತ್ರಜ್ಞರೇ ಸಂಪೂರ್ಣ ಕನ್ನಡ ಸಿನಿಮಾದಲ್ಲಿ ಕೆಲಸ ಮಾಡಿದ್ದಾರೆ.

★ *ನಿಮ್ಮ ಪ್ಯಾಶನ್ ಬಗ್ಗೆಯೂ ಹೇಳಿ..*

ಡಾನ್ಸ್ ನನ್ನ ಪ್ಯಾಶನ್. ಆ ಮೂಲಕ ಬದುಕಿನ ಬಗ್ಗೆ ಕಲಿಸಬೇಕು ಎನ್ನುವುದು ನನ್ನ ಬಯಕೆ. ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿಯೇ ಏನೋ ಲೋಪ ಇದೆ ಅಂತ ನನಗೆ ಅನ್ನಿಸುತ್ತದೆ. ಅದೇ ಕಾರಣಕ್ಕೆ ನಮ್ಮ ಮಕ್ಕಳು ಆತ್ಮವಿಶ್ವಾಸದ ಕೊರತೆಯಿಂದ ಬಳಲುತ್ತಿದ್ದಾರೆ. ಅದನ್ನು ಹೋಗಲಾಡಿಸಬೇಕು ಎಂದರೆ ಮಕ್ಕಳಿಗೆ ರಂಗಭೂಮಿಯನ್ನು ಪರಿಚಯಿಸಬೇಕು. ಸಂಗೀತ, ನೃತ್ಯ ಕೂಡ ತುಂಬಾ ಮುಖ್ಯ. ಇವು ಆತ್ಮವಿಶ್ವಾಸವನ್ನು ತುಂಬುತ್ತವೆ. ಇದನ್ನು ಕಲೆಯನ್ನು ಅಭ್ಯಾಸ ಮಾಡುವ ಯಾವುದೇ ಮಗುವಿನ ಮೇಲೆ ಪ್ರಾಯೋಗಿಕವಾಗಿ ನೋಡಬಹುದು. ಇದೇ ಕಾರಣಕ್ಕೆ ಬಿಡುವಿನ ಸಮಯವನ್ನು ಮಕ್ಕಳಿಗೆ ನೃತ್ಯ ಹೇಳಿಕೊಡಲು ವಿನಿಯೋಗಿಸುತ್ತೇನೆ. ಅಂಕಗಳ ಹಿಂದೆ ಬಿದ್ದಿರುವ ನಾವು ವಿದ್ಯಾರ್ಥಿಗಳ ಮೌಲ್ಯಮಾಪನ ಮಾಡಲು ಸಾಧ್ಯವೇ ಇಲ್ಲ.

★ *ಸಾಮಾಜಿಕ ಕಾರ್ಯದಲ್ಲಿಯೂ ತೊಡಗಿದ್ದೀರಂತೆ...*

ಅದು ನನ್ನ ತೃಪ್ತಿಗೆ ಮಾಡುವ ಕೆಲಸ. ಅದನ್ನು ಗುಪ್ತವಾಗಿಯೇ ಇಡಲು ಬಯಸುತ್ತೇನೆ. ಅದು ಪ್ರಚಾರ ಪಡೆಯುವ ಸಂಗತಿ ಅಲ್ಲ. ಶಿಕ್ಷಣಕ್ಕೆ ಪ್ರೋತ್ಸಾಹಿಸಬೇಕು ಎನ್ನುವುದು ನನ್ನ ಪ್ರಾಮುಖ್ಯತೆ ಅಲ್ಲ. ಶಿಕ್ಷಣಕ್ಕೆ ನೆರವು ನೀಡಲು ತುಂಬಾ ಜನರಿದ್ದಾರೆ. ನಾನು ಅಸಹಾಯಕ ಮಕ್ಕಳೂ ಸಮರ್ಥವಾಗಿ ಬೆಳೆಯಲಿ ಎನ್ನುವ ದೃಷ್ಟಿಯಿಂದ ಡಾನ್ಸ್ ಕಲಿಸುವ ಉದ್ದೇಶಕ್ಕೆ ಹಣವನ್ನು ನೀಡುತ್ತೇನೆ. ನಾನು ಸಹಾಯ ನೀಡುವ ಎನ್‌ಜಿಒ ಮುಖ್ಯಸ್ಥರು ಕೂಡ ಅದೇ ಕಾರ್ಯಕ್ಕೆ ಬಳಸುತ್ತಿದ್ದಾರೆ. ಸಂಗೀತ– ನೃತ್ಯದಂತಹ ಕಲೆಯನ್ನು ಕಲಿಯುವ ಮಗುವಿನ ಮೆದುಳು ಹೆಚ್ಚು ಚುರುಕಾಗಿ ಇರುತ್ತದೆ. ಸಂಗೀತ ಆಲಿಸುವ ಮಗುವಿನ ಆಲೋಚನಾ ಕ್ರಮವೇ ಬೇರೆ ಇರುತ್ತದೆ. ವ್ಯಕ್ತಿತ್ವದಲ್ಲಿಯೂ ಬದಲಾವಣೆ ಆಗುವುದನ್ನು ಖಂಡಿತಾ ನಾವು ಗಮನಿಸಬಹುದು. ಇದೇ ಕಾರಣಕ್ಕೆ ಕೆಲವು ಮಕ್ಕಳಿಗೆ ಅನುಕೂಲವಾಗಲಿ ಎಂದು ಆ ಕೆಲಸವನ್ನು ಮಾಡುತ್ತಿದ್ದೇನೆ.

■ **ರಾಘವೇಂದ್ರ**